# ಮಗುವಿಗಾಗಿ... ಎಲ್ಲ ಮಗುವಿಗಾಗಿ



ಧಾವಂತದ ಜೀವನ, ಒತ್ತಡದಿಂದಾಗಿ ಬಂಜೆತನ ಅನುಭವಿಸಬೇಕಾಗಿದೆ ಎಂಬುದೊಂದು ನಂಬಿಕೆ. ಇದಕ್ಕೆ ಪ್ರತಿಯಾಗಿ ನಿರಾಳವಾಗಿದ್ದರೆ ಸಾಕು, ಗರ್ಭಧಾರಣೆ ಸಾಧ್ಯ ಎಂದೂ ನಂಬುವವರಿದ್ದಾರೆ. ಆದರೆ ಒತ್ತಡ ಯಾವ ಪ್ರಮಾಣದಲ್ಲಿದೆ? ದೇಹದ ಯಾವ ಪ್ರಕ್ರಿಯೆಯ ಮೇಲೆ ಪರಿಣಾಮ ಬೀರುತ್ತಿದೆ ಎನ್ನುವುದು ಪತ್ತೆ ಮಾಡುವುದು ಕಷ್ಟ ಸಾಧ್ಯ. ಮಾನಸಿಕ ಒತ್ತಡದಿಂದಾಗಿ ಕಾರ್ಟಿಸೋಲ್, ಎಪಿನೆಫ್ರಿನ್, ಮೆಲಟೋನಿನ್ ಮುಂತಾದವುಗಳ ಮೇಲೆ ಯಾವ ಬಗೆಯ ಪರಿಣಾಮ ಬೀರುತ್ತಿದೆ ಎನ್ನುವುದನ್ನು ನಿರ್ಧರಿಸಲಾಗದು. ಆದರೆ ಮನಸು ಮತ್ತು ದೇಹಗಳ ನಡುವಿನ ಸಂಬಂಧವನ್ನು ನಿರ್ಧರಿಸುವ ಈ ಹಾರ್ಮೋನುಗಳಿಂದಾಗಿ ಸಂತಾನೋತ್ಪತ್ತಿಯ ಮೇಲೆ ಪರಿಣಾಮ ಬೀರುತ್ತಿರುವುದು ನಿಜ. ಈ ದಿನಗಳಲ್ಲಿ ಇಂಥ ಕಾರಣಗಳೇ ಬಂಜೆತನಕ್ಕೆ ಮೂಲ ಎಂಬ ನಂಬಿಕೆಯನ್ನು ಹರಡುತ್ತಿವೆ. ಈ ನಂಬಿಕೆಯ ಸೆಲೆಯನ್ನು ಅವಲಂಬಿಸಿಯೇ ಅನೇಕ ಚಿಕಿತ್ಸೆಗಳೂ ಆಗುತ್ತಿವೆ. ಆದರೆ ಬಂಜೆತನಕ್ಕೆ ಕೇವಲ ಒತ್ತಡ ಒಂದೇ ಕಾರಣವೇ? ಒತ್ತಡದಿಂದಾಗಿಯೇ ಗರ್ಭಧಾರಣೆಯಾಗುತ್ತಿಲ್ಲವೇ? ಒತ್ತಡ ನಿರ್ವಹಿಸಿದೊಡನೆ ಗರ್ಭಧಾರಣೆ ಸಾಧ್ಯವೇ ಎನ್ನುವುದನ್ನು ಈಗಲೂ ಹೇಳಲಾಗುವುದಿಲ್ಲ. ಗರ್ಭಧಾರಣೆಗೆ ಕೇವಲ ಒತ್ತಡ ನಿರ್ವಹಣೆಯೊಂದೇ ಪರಿಹಾರವಲ್ಲ. ಇದು ಅನೇಕ ದೈಹಿಕ, ಭೌತಿಕ ಕಾರಣಗಳನ್ನೂ ಅವಲಂಬಿಸಿರುತ್ತದೆ ಎನ್ನುವುದನ್ನು ಅದ್ಹೇಗೆ ಮರೆಯಲು ಸಾಧ್ಯ?

ಒತ್ತಡ ನಿರ್ವಹಣೆ ಮತ್ತು ಗರ್ಭಧಾರಣೆಗಳೆರಡೂ ವಿವಾದಿತ ವಿಷಯಗಳಾಗಿಯೇ ಉಳಿದಿವೆ. ಸಮಾಲೋಚನೆಗೆ ಬರುವ ರೋಗಿಗಳು ಈ ಪ್ರಶ್ನೆಯನ್ನು ಎತ್ತಿದೊಡನೆಯೇ, ನಿರ್ವಿವಾದಿತವಾಗಿ ಅವರಿಗೆ ಒತ್ತಡ ನಿರ್ವಹಣೆಗೆ ಅಥವಾ ನಿವಾರಣೆಗೆ ಪ್ರಯತ್ನಿಸಿ ಎನ್ನುವ ಸಲಹೆಯನ್ನಂತೂ ನೀಡಲಾಗುತ್ತದೆ. ಅದು ಕೆಲ ಮಟ್ಟಿಗೆ ಅವರಲ್ಲಿ ಸಕಾರಾತ್ಮಕ ಭಾವನೆಯನ್ನು ತರಬಹುದು. ಆದರೆ ಇದು ಖಂಡಿತವಾಗಿಯೂ ಗರ್ಭಧಾರಣೆಗೆ ಯಾವ ಸಹಾಯವನ್ನೂ ಮಾಡುವುದಿಲ್ಲ ಎನ್ನುವುದು ಮಾತ್ರ ಸತ್ಯ.

ಬಹುತೇಕ ಜನರು ಬಂಜೆತನದ ಚಿಕಿತ್ಸೆ ಎಂದೊಡನೆ ಇದು ಸಹಜ ಗರ್ಭಧಾರಣೆ ಅಲ್ಲ ಎಂಬ ನಿರ್ಣಯಕ್ಕೆ ಬರುತ್ತಾರೆ. ಆದರೆ ಒಬ್ಬ ವೈದ್ಯ ಯಾವುದೇ ಅತಿರೇಕದ ಚಿಕಿತ್ಸೆಯನ್ನು ಸೂಚಿಸುವ ಮೊದಲು ಸಾಧ್ಯವಾದಷ್ಟೂ ಸಹಜವಾದ ಗರ್ಭಧಾರಣೆಯನ್ನು ಪ್ರಯತ್ನಿಸುತ್ತಾರೆ. ಹಾಗೂ ಸಹಜ ಗರ್ಭಧಾರಣೆಯ ಪ್ರಮಾಣ ಎಷ್ಟಿದೆ ಎನ್ನುವುದನ್ನು ತನ್ನ ಬಳಿ ಬಂದಿರುವ ದಂಪತಿಗೆ ಸ್ಪಷ್ಟವಾಗಿ ತಿಳಿಸಿರುತ್ತಾರೆ. ಯಾವುದೇ ಬಗೆಯ ಚಿಕಿತ್ಸೆಗೆ ಮುನ್ನ ಯಾವುದು ಅತಿ ಪರಿಣಾಮಕಾರಿ ಹಾಗೂ ಅತ್ಯವಶ್ಯ ಎನ್ನುವುದನ್ನು ದಂಪತಿಯೊಂದಿಗೆ ಚರ್ಚಿಸಿಯೇ ನಿರ್ಣಯಿಸಿರುತ್ತಾರೆ.

ಸಿನಿಮಾ ತಾರೆಯರು ತಮ್ಮ ನಲ್ವತ್ತು ಐವತ್ತನೇ ವಯಸ್ಸಿನಲ್ಲಿ ಐವಿಎಫ್ ಮೂಲಕ ಮಕ್ಕಳನ್ನು ಪಡೆಯುತ್ತಾರೆ. ನಾವೂ ಅದೇ ರೀತಿ ಪಡೆಯಬಹುದಲ್ಲವೇ? ಎನ್ನುವುದು ಇನ್ನಷ್ಟು ಜನರ ಪ್ರಶ್ನೆಯಾಗಿದೆ.

ಐವಿಎಫ್ ಚಿಕಿತ್ಸೆಯು ಯುವತಿಯರಲ್ಲಿ

ಅಂಕುರ

**ಸೃಷ್ಟಿಕ್ರಿಯೆಯ ಗತಿವಿಧಿ ವಿವರಿಸಲಿದ್ದಾರೆ ಆ್ಯಂಡ್ರೊಲಜಿಸ್ಟ್**

**ಡಾ. ಎಸ್.ಎಸ್. ವಾಸನ್**

19

ಯಶಸ್ವಿಯಾಗಿರುವ ಚಿಕಿತ್ಸೆಯಾಗಿದೆ. 2008ರಲ್ಲಿ ಯುವತಿಯರಲ್ಲಿ ಐವಿಎಫ್ ಮೂಲಕ ಶೇ 48ರಷ್ಟು ಜನರಿಗೆ ಗರ್ಭಧಾರಣೆಯಾಗಿದೆ. ಆದರೆ 40ರ ಅಂಚಿನಲ್ಲಿರುವವರಲ್ಲಿ ಶೇ 9ರಷ್ಟು ಜನಕ್ಕೆ ಮಾತ್ರ ಗರ್ಭಧಾರಣೆಯಾಗಿದೆ ಎನ್ನುವುದೂ ಉಲ್ಲೇಖನೀಯವಾಗಿದೆ. ಶೇ 9ರಲ್ಲಿಯೂ ಬಹುತೇಕ ಪಾಲು ಹೆಣ್ಣುಮಕ್ಕಳಿಗೆ ಗರ್ಭಸ್ರಾವವಾಗಿರುವುದೂ ಗಮನೀಯ ಅಂಶವಾಗಿದೆ. ಬಹುತೇಕ ಐವಿಎಫ್ ಕೇಂದ್ರಗಳಲ್ಲಿ 45 ವಯಸ್ಸು ದಾಟಿರುವ ಮಹಿಳೆಯರಿಗೆ ಅವರದ್ದೇ ಅಂಡಾಣುವಿನೊಂದಿಗೆ ಐವಿಎಫ್ ಚಿಕಿತ್ಸೆ ನೀಡುವುದನ್ನು ನಿರಾಕರಿಸಲಾಗುತ್ತದೆ. ಮೊದಲು ಐವಿಎಫ್ ಚಿಕಿತ್ಸೆಯನ್ನೇ ನಿರಾಕರಿಸಲಾಗುತ್ತದೆ. ಒಂದು ವೇಳೆ ಈ ಚಿಕಿತ್ಸೆಗೆ ಮುಂದಾದರೂ ಅವರ ಅಂಡಾಣುವನ್ನು ಬಳಸುವುದಿಲ್ಲ.

40 ಮತ್ತು ಐವತ್ತರ ಅಂಚಿನಲ್ಲಿ ಅವಳಿಗಳನ್ನು ಪಡೆಯುವುದು ಜನಪ್ರಿಯ ವ್ಯಕ್ತಿಗಳಿಗೆ ಹೇಗೆ ಸಾಧ್ಯ? ಇವು ದಾನಿಗಳಿಂದ ಅಂಡಾಣು ಪಡೆದಿರುವ ಮಕ್ಕಳು. ಇವು ಆರೋಗ್ಯವಂತ ಅನಾಮಿಕ ಯುವತಿಯರಿಂದ ಪಡೆದಿರುವ ಅಂಡಾಣುಗಳನ್ನು ಫಲಿತಗೊಳಿಸಿ, ಅವರ ಗರ್ಭಾಶಯದಲ್ಲಿ ಕಸಿ ಮಾಡಲಾಗುತ್ತದೆ. ಫಲಿತ ಭ್ರೂಣ ಅವರ ಗರ್ಭಾಶಯದಲ್ಲಿ ಬೆಳೆಯುತ್ತವೆ.

ದಾನಿಗಳಿಂದ ಅಂಡಾಣು ಪಡೆದು ಐವಿಎಫ್ ಚಿಕಿತ್ಸೆ ನೀಡುವುದು ಅತ್ಯದ್ಭುತ ವ್ಯವಸ್ಥೆಯಾಗಿದೆ. ಆದರೆ ಈ ನಿಟ್ಟಿನಲ್ಲಿ ಪಾಲಕರು ತಮ್ಮದೇ ಜೀನ್ಸ್‌ಗಳನ್ನು ತಮ್ಮ ಮಕ್ಕಳಿಗೆ ನೀಡಲಾರೆವು ಎನ್ನುವ ಅನಿವಾರ್ಯವನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಈ ದಿಕ್ಕಿನಲ್ಲಿ ಪಾಲಕರಿಗೆ ಭಾವನಾತ್ಮಕವಾಗಿಯೂ ಮಾನಸಿಕವಾಗಿಯೂ ಸಾಕಷ್ಟು ಬೆಂಬಲ ನೀಡಬೇಕು. ಸಮಾಲೋಚನೆಗೆ ಪಾಲಕರು ತೆರೆದುಕೊಳ್ಳಬೇಕು.

ಎಲ್ಲ ಐವಿಎಫ್ ಕೇಂದ್ರಗಳೂ ಏಕರೂಪದಲ್ಲಿ ಕಾರ್ಯ ನಿರ್ವಹಿಸುತ್ತವೆ ಎನ್ನುವುದೊಂದು ನಂಬಿಕೆ ಜನ ಸಾಮಾನ್ಯರಲ್ಲಿದೆ. ಯಾವುದೇ ಕೇಂದ್ರಕ್ಕೆ ಹೋಗುವ ಮುನ್ನ ಕೆಲವು ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕು. ಇಲ್ಲದಿದ್ದರೆ ಅಣಬೆಗಳಂತೆ ಹುಟ್ಟಿಕೊಳ್ಳುತ್ತಿರುವ ಐವಿಎಫ್ ಕೇಂದ್ರಗಳ ಸಾಚಾತನ ಅಥವಾ ಗುಣಮಟ್ಟದ ಬಗ್ಗೆಯೇ ಸಂಶಯದಿಂದ ಕಾಣಬೇಕು. ಯಾವ ಕೇಂದ್ರ ಚಿಕಿತ್ಸೆಗೆ ಒಳಿತು ಎನ್ನುವ ನಿರ್ಧಾರಕ್ಕೆ ಬರುವ ಮುನ್ನ ಈ ಅಂಶಗಳನ್ನು ಗಮನದಲ್ಲಿರಿಸಿ

- ವೈದ್ಯರ ವಿದ್ಯಾರ್ಹತೆ ಹಾಗೂ ನಂಬಿಕೆ, ಸಾಮರ್ಥ್ಯ.
- ಚಿಕಿತ್ಸೆಗೆ ಐಸಿಎಂಆರ್ ಮಾನದಂಡವನ್ನು ನಿರ್ವಹಿಸುವ ಕೇಂದ್ರವಾಗಿದೆಯೇ? ಕೇಂದ್ರವು ನೈರ್ಮಲ್ಯದಿಂದ ಕೂಡಿದೆಯೇ?
- ನಿಮ್ಮ ಅಗತ್ಯಕ್ಕೆ ತಕ್ಕಂಥ ಚಿಕಿತ್ಸೆ ನೀಡುತ್ತಾರೆಯೇ?
- ವಿದ್ಯಾರ್ಹತೆಯುಳ್ಳ ಎಂಬ್ರಿಯಾಲಜಿಸ್ಟ್ ಹಾಗೂ ಎಂಬ್ರಿಯೊಲ್ಯಾಬ್ ಹೊಂದಿದ್ದಾರೆಯೇ?
- ಮಹಿಳೆಯರಿಗೆ ಹಾಗೂ ಪುರುಷರಿಗೆ ಪ್ರತ್ಯೇಕ ಚಿಕಿತ್ಸೆ ನೀಡಲಾಗುತ್ತದೆಯೇ? ಒಟ್ಟೊಟ್ಟಿಗೆ ನೀಡಲಾಗುತ್ತಿದೆಯೇ?
- ಅವರ ಐವಿಎಫ್ ಕೇಂದ್ರದಲ್ಲಿ ಫಲಿತ ಗರ್ಭಧಾರಣೆಯ ಸಂಖ್ಯೆಯನ್ನು ಪರಿಶೀಲಿಸಿ. ಯಶಸ್ಸು ಕಂಡಿರುವ ಪ್ರಕರಣಗಳ ಸಂಖ್ಯೆಗಳನ್ನು ಪರಿಶೀಲಿಸಿ.
- ಕಾಲಕಾಲಕ್ಕೆ ಉನ್ನತ ತಂತ್ರಜ್ಞಾನ ಬಳಸುತ್ತಿದ್ದಾರೆಯೇ?

ಕೇವಲ ಬೆಲೆಯನ್ನು ಮಾತ್ರ ಗಮನದಲ್ಲಿರಿಸಿಕೊಳ್ಳದೇ ಈ ಎಲ್ಲ ಅಂಶಗಳನ್ನು ಪರಿಶೀಲಿಸುವುದು ಒಳಿತು. ಆರೋಗ್ಯವಂತ ಮಗು ಪಡೆಯಲು ಇಷ್ಟು ಎಚ್ಚರವನ್ನೂ ವಹಿಸಲೇಬೇಕಾಗುತ್ತದೆ.

ಮಾಹಿತಿಗೆ: **info@manipalankur.com**